



**ಗಗನಾ**
8ನೇ ತರಗತಿ, ಸಂತ, ಚಾರ್ಲ್ಸ್ ಇಂಗ್ಲಿಷ್ ಹೈಸ್ಕೂಲ್, ಭದ್ರಾವತಿ



## ಕುಂಚ ಪ್ರಪಂಚ



**ಮಾಲ್ವಿ ಎಲ್.ಕೆ.**
2ನೇ ತರಗತಿ, ಸಂತ ಸೆಬಾಸ್ಟಿಯನ್ ಆಂಗ್ಲ ಮಾಧ್ಯಮ ಶಾಲೆ, ತೊಕ್ಕೊಟ್ಟು, ಮಂಗಳೂರು

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in

# ಓಣಿ ತುಂಬ ಓಕುಳಿ

**ಯು.ಜೆ. ಕುಲಕರ್ಣಿ**
ಕಲೆ: ಸಂತೋಷ್ ಸಸಿಹಿತ್ಲು

ಹಲಗಿ ಮ್ಯಾಳದ ಸದ್ದು
ಕಟಗಿ ತಂದಾರೊ ಕದ್ದು
ಹೋಳಿ ಹುಣ್ಣಿಮೆ ನಾಳೆಗೆ
ಅಕ್ಕ ಮಾಡ್ಯಾಳ ಹೋಳಿಗೆ

ಓಣಿ ತುಂಬಾ ಓಕುಳಿ
ಹುಡುಗುರ ಕೈಯಾಗ ಜೀಕಳಿ
ಕೋಟೆ ನಾಡಿನ ಮಕ್ಕಳ
ಹಲಗಿ ಮ್ಯಾಳದ ಸಪ್ಪಳ

ಸಿಟ್ಟಾದ ಶಿವನ. ತಾಪ
ಕಾಮಣ್ಣ ಸುಟ್ಟಾನ ಪಾಪ
ಚಿರಂಜೀವಿ ಆಗೆಂದ ಶಿವಶಿವ
ಚೈತ್ರ ಚಿಗುರಿನ ಹವ ಹವ

ಓಣಿ ತುಂಬಾ ಓಕುಳಿ
ಹುಡುಗುರ ಕೈಯಾಗ ಜೀಕಳಿ
ಕಾಮನ ಸುಡುತಾರ ನೋಡ್ರಿ
ಬೂದಿ ಬಣ್ಣ ಆಡರಿ

